# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **956** |
| ಸದಸ್ಯರ ಹೆಸರು | : | **ಶ್ರೀ ಕೆ ಎ ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು)** |
| ಉತ್ತರಿಸುವ ದಿನಾಂಕ | : | **17-12-2024** |
| ಉತ್ತರಿಸುವ ಸಚಿವರು | : | **ಮಾನ್ಯ ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ವಲಯ ಉದ್ದಿಮೆಗಳ ಸಚಿವರು.** |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳನ್ನು ಯಾವ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ; (ಪೂರ್ಣ ವಿವರ ನೀಡುವುದು) | ಎಂ.ಎಸ್.ಎಂ.ಇ ಡಿ ಕಾಯ್ದೆ (ಸೂಕ್ಷ್ಮ ಸಣ್ಣ ಮಧ್ಯಮ ಕೈಗಾರಿಕೆಗಳ ಅಭಿವೃದ್ಧಿ ಕಾಯ್ದೆ) 2006 ರ ಪ್ರಕಾರ ಎಂ.ಎಸ್.ಎಂ.ಇ. (ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು)ಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.<br><br>*ಸೂಕ್ಷ್ಮ ಕೈಗಾರಿಕೆಗಳು: ಸ್ಥಾವರ ಮತ್ತು ಯಂತ್ರೋಪಕರಣಗಳ ಮೇಲಿನ ಹೂಡಿಕೆಯು ರೂ.1 ಕೋಟಿಗಳಿಗಿಂತ ಹೆಚ್ಚಳವಾಗದೇ ಇದ್ದಲ್ಲಿ ಮತ್ತು ವಾರ್ಷಿಕ ವಹಿವಾಟು ರೂ.5 ಕೋಟಿಗೂ ಹೆಚ್ಚಳವಾಗದೇ ಹೋದಲ್ಲಿ.<br><br>* ಸಣ್ಣ ಕೈಗಾರಿಕೆಗಳು: ಸ್ಥಾವರ ಮತ್ತು ಯಂತ್ರೋಪಕರಣಗಳ ಮೇಲಿನ ಹೂಡಿಕೆಯು ರೂ.10 ಕೋಟಿಗಳಿಗಿಂತ ಹೆಚ್ಚಳವಾಗದೇ ಇದ್ದಲ್ಲಿ ಮತ್ತು ವಾರ್ಷಿಕ ವಹಿವಾಟು ರೂ.50 ಕೋಟಿಗೂ ಹೆಚ್ಚಳವಾಗದೇ ಹೋದಲ್ಲಿ.<br><br>*ಮಧ್ಯಮ ಕೈಗಾರಿಕೆಗಳು: ಸ್ಥಾವರ ಮತ್ತು ಯಂತ್ರೋಪಕರಣಗಳ ಮೇಲಿನ ಹೂಡಿಕೆಯು ರೂ.50 ಕೋಟಿಗಳಿಗಿಂತ ಹೆಚ್ಚಳವಾಗದೇ ಇದ್ದಲ್ಲಿ ಮತ್ತು ವಾರ್ಷಿಕ ವಹಿವಾಟು ರೂ.250 ಕೋಟಿಗೂ ಹೆಚ್ಚಳವಾಗದೇ ಹೋದಲ್ಲಿ. |
| (ಆ) | ರಾಜ್ಯದಲ್ಲಿ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳೆಂದು ನೋಂದಾಯಿಸಿರುವ ಉದ್ಯಮಗಳು ಎಷ್ಟು; (ಜಿಲ್ಲಾವಾರು ಪೂರ್ಣ ಮಾಹಿತಿ ನೀಡುವುದು) | ಭಾರತ ಸರ್ಕಾರದ ಉದ್ಯಮ್ ತಂತ್ರಾಂಶದನ್ವಯ ರಾಜ್ಯದಲ್ಲಿ ಒಟ್ಟು 17,44,655 ಕೈಗಾರಿಕೆಗಳು ನೊಂದಣಿಯಾಗಿರುತ್ತವೆ. ಅವುಗಳ ಪೈಕಿ 17,05,826 ಸೂಕ್ಷ್ಮ ಕೈಗಾರಿಕೆಗಳು, 35,888 ಸಣ್ಣ ಕೈಗಾರಿಕೆಗಳು ಹಾಗೂ 2,941 ಮಧ್ಯಮ ಕೈಗಾರಿಕೆಗಳಾಗಿರುತ್ತವೆ., ಜಿಲ್ಲಾವಾರು ವಿವರಗಳನ್ನು ಅನುಬಂಧ –1 ರಲ್ಲಿ ಲಗತ್ತಿಸಿದೆ. |
| (ಇ) | ಈ ಉದ್ಯಮಗಳ ನಿರ್ವಹಣೆ ಮೇಲ್ವಿಚಾರಣೆ ಮತ್ತು ಪ್ರೋತ್ಸಾಹಗಳಿಗೆ ರಾಜ್ಯ ಸರ್ಕಾರದ ಅಧೀನದಲ್ಲಿರುವ ಇಲಾಖೆ / ನಿಗಮ / ಮಂಡಳಿಗಳು ಯಾವುವು; ಮತ್ತು ಅವುಗಳ ಕಾರ್ಯವೈಖರಿಗಳೇನು; (ಈ ಬಗ್ಗೆ ಪೂರ್ಣ ಮಾಹಿತಿ ನೀಡುವುದು) | ಈ ಉದ್ಯಮಗಳ ನಿರ್ವಹಣೆ ಮೇಲ್ವಿಚಾರಣೆ ಮತ್ತು ಪ್ರೋತ್ಸಾಹಗಳಿಗೆ ರಾಜ್ಯ ಸರ್ಕಾರದ ಇಲಾಖಾ ಅಧೀನದಲ್ಲಿ ಪ್ರತಿ ಜಿಲ್ಲೆಯಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.<br>ಇಲಾಖೆಯ ಅಧೀನದಲ್ಲಿ MSME ಅಭಿವೃದ್ಧಿಗೆ ಕೆಲಸ ಮಾಡುತ್ತಿರುವ ಇಲಾಖಾ/ ನಿಗಮ/ಮಂಡಳಿಗಳು ಕೆಳಕಂಡಂತಿವೆ:<br>1. ನಿರ್ದೇಶಕರು (ಎಂ.ಎಸ್.ಎಂ.ಇ.), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-ಇಲಾಖಾ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಪೂರ್ಣ ಉಸ್ತುವಾರಿ.<br>2. ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-10- ಕೈಗಾರಿಕಾ ವಸಾಹತುಗಳ ನಿರ್ಮಾಣದ ಮೂಲಕ ಕೈಗಾರಿಕೆಗಳಿಗೆ ನಿವೇಶನ ಮತ್ತು ಮಳಿಗೆ ಹಂಚಿಕೆ.<br>3. ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ |

ನಿಯಮಿತ, ನಂ.45, ಕೆ.ಎಸ್.ಹೆಚ್.ಡಿ.ಸಿ. ಕಾಂಪ್ಲೆಕ್ಸ್, ಎಂ.ಜಿ. ರಸ್ತೆ, ಬೆಂಗಳೂರು- ರಾಜ್ಯದಲ್ಲಿ ಕರಕುಶಲ ವಲಯದ ಅಭಿವೃದ್ಧಿ.

4. ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತ, ಎಸ್‌ಎಫ್-4 & 5, ಸ್ಟರ್ಲಿಂಗ್ ಟವರಸ್ (ಗಾರ್ಮೆಂಟ್ ಕಾಂಪ್ಲೆಕ್ಸ್), 6ನೇ ಬ್ಲಾಕ್, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-10- ತೆಂಗಿನ ನಾರಿನ ವಲಯದ ಅಭಿವೃದ್ಧಿ.
5. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ, "ಖಾದಿ ಭವನ", ನಂ.10, ಜಸ್ಮಾ ಭವನ ರಸ್ತೆ, ವಸಂತನಗರ, ಬೆಂಗಳೂರು- 52-ಖಾದಿ ವಲಯದ ಅಭಿವೃದ್ಧಿ.
6. ಕರ್ನಾಟಕ ರಾಜ್ಯ ತೆಂಗಿನ ನಾರಿನ ಸಹಕಾರ ಮಹಾಮಂಡಳಿ (ನಿ), ಜಿಲ್ಲಾ ಕೈಗಾರಿಕಾ ಕೇಂದ್ರದ ಕಟ್ಟಡ 3ನೇ ಮಹಡಿ, 1ನೇ ಅಡ್ಡರಸ್ತೆ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು–10- ತೆಂಗಿನ ನಾರಿನ ವಲಯದ ಅಭಿವೃದ್ಧಿ.
7. ಕರ್ನಾಟಕ ತಾಂತ್ರಿಕ ಉನ್ನತೀಕರಣ ಪರಿಷತ್ತು, 2ನೇ ಮಹಡಿ, ಜಿಲ್ಲಾ ಕೈಗಾರಿಕಾ ಕೇಂದ್ರ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-10- MSME ಗಳಿಗೆ ತಂತ್ರಜ್ಞಾನ ನೆರವು.
8. ಕರ್ನಾಟಕ ಸರ್ಕಾರ ಚರ್ಮ ತಾಂತ್ರಿಕ ಸಂಸ್ಥೆ (ಕಿಲ್ಪ್), ಉಲ್ಲಾಳ್ ಉಪನಗರ, ಬೆಂಗಳೂರು-10- ಚರ್ಮ ತಾಂತ್ರಿಕ ಶಿಕ್ಷಣ ನೀಡುವುದು.

(ಈ) ರಾಜ್ಯದಲ್ಲಿ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ ಪ್ರೋತ್ಸಾಹಿಸುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಯೋಜನೆಗಳು ಯಾವುವು; ಈ ಯೋಜನೆಗಳ ಅಡಿಯಲ್ಲಿ ಉದ್ಯಮಗಳಿಗೆ ಲಭ್ಯವಾಗುತ್ತಿರುವ ಆರ್ಥಿಕ ನೆರವುಗಳು ಯಾವುವು; ಮತ್ತು ಈ ಉದ್ಯಮಗಳಿಗೆ ಕಳೆದ 03 ವರ್ಷಗಳಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ದೊರೆತಿರುವ ಆರ್ಥಿಕ ನೆರವು ಎಷ್ಟು; ಈ ರೀತಿ ನೆರವಿನಿಂದ ಎಷ್ಟು ಉದ್ಯಮಗಳನ್ನು ಪುನಃಶ್ಚೇತನಗೊಳಿಸಲಾಗಿದೆ; (ಜಿಲ್ಲಾವಾರು ಮತ್ತು ವರ್ಷವಾರು ಮಾಹಿತಿ ನೀಡುವುದು)

**ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನೆ ಯೋಜನೆ (ಪಿಎಂಇಜಿಪಿ),**

- 2008-09ನೇ ಸಾಲಿನಿಂದ ಪ್ರಧಾನ ಮಂತ್ರಿಗಳ ಉದ್ಯೋಗ ಸೃಷ್ಟಿ ಕಾರ್ಯಕ್ರಮವನ್ನು (PMEGP) ಜಾರಿಗೊಳಿಸಲಾಗುತ್ತಿದೆ. ಸ್ಥಳೀಯ ಸಂಪನ್ಮೂಲಗಳ ಆಧಾರದ ಮೇಲೆ ಉತ್ಪಾದನೆ ಮತ್ತು ಸೇವಾ ವಲಯಗಳ ಅಡಿಯಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವ ಮೂಲಕ ವಿದ್ಯಾವಂತ ನಿರುದ್ಯೋಗಿ ಯುವಕರಿಗೆ ಉದ್ಯೋಗವನ್ನು ಒದಗಿಸುವುದು ಯೋಜನೆಯ ಉದ್ದೇಶವಾಗಿದೆ.
- ಈ ಯೋಜನೆಯಡಿ ವಿವಿಧ ಬ್ಯಾಂಕ್‌ಗಳ ಮೂಲಕ ಉತ್ಪಾದನಾ ವಲಯಕ್ಕೆ ರೂ. 50.00 ಲಕ್ಷ ಮತ್ತು ಸೇವಾ ವಲಯಕ್ಕೆ ರೂ. 20.00 ಲಕ್ಷದವರೆಗೆ ಸಾಲವನ್ನು ವಿಸ್ತರಿಸಲಾಗಿದೆ. ಯೋಜನೆಯಡಿಯಲ್ಲಿ 3 ವರ್ಷಗಳ ಪ್ರಗತಿ ವಿವರಗಳು ಕೆಳಕಂಡಂತಿವೆ:

| 2023-24 | | | 2022-23 | | | 2021-22 | | |
|---|---|---|---|---|---|---|---|---|
| ಭೌತಿಕ | ಆರ್ಥಿಕ (ಲಕ್ಷ) | ಉದ್ಯೋಗ | ಭೌತಿಕ | ಆರ್ಥಿಕ (ಲಕ್ಷ) | ಉದ್ಯೋಗ | ಭೌತಿಕ | ಆರ್ಥಿಕ ಲಕ್ಷ) | ಉದ್ಯೋಗ |
| 3903 | 13590.54 | 31224 | 5612 | 16106.92 | 44896 | 5864 | 15774.02 | 46912 |

ಜಿಲ್ಲಾವಾರು ವಿವರಗಳನ್ನು ಅನುಬಂಧ- 2 ರಲ್ಲಿ ವಿವರಿಸಲಾಗಿದೆ.

**ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ ಕಾರ್ಯಕ್ರಮಗಳು:**

- **ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ/ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತರವರಿಂದ ಹಂಚಿಕೆಯಾಗುವ ನಿವೇಶನ/ಪ್ಲಾಟ್/ಶೆಡ್‌ಗಳಿಗೆ ರಿಯಾಯಿತಿ**

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ಉದ್ದಿಮೆದಾರರಿಗೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ/ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮಗಳಿಂದ ಹಂಚಿಕೆಯಾಗುವ 2 ಎಕರೆವರೆಗಿನ ಕೈಗಾರಿಕಾ ನಿವೇಶನ/ಪ್ಲಾಟ್/ಶೆಡ್‌ಗಳನ್ನು ಶೇ.75 ರಷ್ಟು ರಿಯಾಯಿತಿ ದರದಲ್ಲಿ ನೀಡಲಾಗುತ್ತಿದೆ. (ಅನುಬಂಧ – 03 & ಅನುಬಂಧ – 04 ರಲ್ಲಿ ಲಗತ್ತಿಸಿದೆ)

- **ಗುಡಿ ಮತ್ತು ಸೂಕ್ಷ್ಮ ಕೈಗಾರಿಕಾ ಘಟಕಗಳು/ಕುಶಲಕರ್ಮಿಗಳಿಗೆ ಬ್ಯಾಂಕಿನ ಸಾಲದ ಮೇಲೆ ಶೇ.60 ಸಹಾಯಧನ ಕಾರ್ಯಕ್ರಮ**

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಫಲಾನುಭವಿಗಳು ಗುಡಿ ಮತ್ತು ಅತೀ ಸೂಕ್ಷ್ಮ ಕೈಗಾರಿಕಾ ಘಟಕಗಳ ಸ್ಥಾಪನೆಗೆ ಹಣಕಾಸು ಸಂಸ್ಥೆ/ವಾಣಿಜ್ಯ ಬ್ಯಾಂಕ್ ಗಳು, ಸಹಕಾರ ಬ್ಯಾಂಕ್‌ಗಳು, ರೀಜನಲ್ ರೂರಲ್ ಬ್ಯಾಂಕ್ ಗಳಿAದ (ಪತ್ತಿನ ಸಹಕಾರ ಸಂಘಗಳನ್ನು ಹೊರತುಪಡಿಸಿ) ಮಂಜೂರಾದ ಸಾಲದ ಮೇಲೆ, ಇಲಾಖೆ ವತಿಯಿಂದ ರೂ.10.00ಲಕ್ಷ ಮೀರದಂತೆ ಇರುವ ಯೋಜನೆಗಳಿಗೆ ಯೋಜನಾ ವೆಚ್ಚದ ಮೇಲೆ ಶೇ.60 ರಷ್ಟು ಗರಿಷ್ಟ ರೂ.5.00 ಲಕ್ಷಗಳವರೆಗೂ ಸಹಾಯಧನವನ್ನು ಮಂಜೂರು ಮಾಡಲಾಗುತ್ತಿದೆ. (ಅನುಬಂಧ – 05 ರಲ್ಲಿ ಲಗತ್ತಿಸಿದೆ)

- **ಅತೀ ಸಣ್ಣ/ಸಣ್ಣ ಕೈಗಾರಿಕಾ ಘಟಕಗಳಿಗೆ ಸಾಫ್ಟ್ ಸೀಡ್ ಆರ್ಥಿಕ ಸಹಾಯ:**

ಸರ್ಕಾರ ಆದೇಶ ಸಂಖ್ಯೆ: ಸಿ ಐ ಸಪ್ರಕೈ 2019 (ಭಾ-1) ದಿನಾಂಕ: 13-09-2022 ರ ಮಾರ್ಗಸೂಚಿಯಲ್ಲಿ ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಾಲ ಯೋಜನೆಯ ಸೌಲಭ್ಯವನ್ನು ಹೊಸಘಟಕ / ಆಧುನೀಕರಣ / ವೈವಿಧ್ಯೀಕರಣ ಮತ್ತು ವಿಸ್ತರಣೆ ಯೋಜನೆಗಳಿಗೆ ಪ.ಜಾ/ಪ.ಪಂ. ಉದ್ಯಮಿದಾರರಿಗೆ ಬ್ಯಾಂಕ್/ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದು ಯೋಜನಾ ವೆಚ್ಚದ ಸ್ಥಿರಾಸ್ತಿ ಮೌಲ್ಯ Debt Equity ratio 2:1 ಪ್ರಕಾರ (2/3 ರಷ್ಟು ಬ್ಯಾಂಕ್/ ಹಣಕಾಸು ಸಂಸ್ಥೆಗಳಿಂದ ಸಾಲ ಮತ್ತು 1/3 ಪ್ರವರ್ತಕರ ಬಂಡವಾಳ) ಘಟಕಕ್ಕೆ ಪ್ರವರ್ತಕ ಬಂಡವಾಳ ಹೂಡಿಕೆಯ 1/3 ರಲ್ಲಿ ಶೇ.50 ರಷ್ಟು ಬಡ್ಡಿ ರಹಿತ ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ ನೆರವು ನೀಡಲಾಗುತ್ತಿದೆ.

ಯಂತ್ರೋಪ ಕರಣಗಳ ಮೇಲೆ ರೂ.10.00 ಕೋಟಿ ಹೂಡಿಕೆ ಮಾಡಿರುವ ಘಟಕಗಳು ಗರಿಷ್ಟ ರೂ.75.00 ಲಕ್ಷಗಳ ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ ನೆರವು ಪಡೆಯಬಹುದಾಗಿದೆ. ಮಂಜೂರಾತಿ ಸಮಿತಿ ಸಭೆಯಲ್ಲಿ ವಿವರವಾದ ಪರಿಶೀಲನೆಯ ನಂತರ ಪರಿಶೀಲನಾ ಸಮಿತಿ ಶಿಫಾರಸ್ಸು ಮಾಡಿದ ಘಟಕಗಳಿಗೆ ಸಾಫ್ಟ್ ಸೀಡ್ ಕ್ಯಾಪಿಟಲ್ ಸಹಾಯವನ್ನು ಮಂಜೂರು ಮಾಡಲಾಗುತ್ತಿದೆ.

| | | |
|---|---|---|
| | | (ಅನುಬಂಧ – 06 ರಲ್ಲಿ ಲಗತ್ತಿಸಿದೆ)<br><br>• **ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ದವರು ಕೆಎಸ್.ಎಫ್ಸಿ ಮತ್ತು ಇತರೇ ಹಣಕಾಸು ಸಂಸ್ಥೆಯವರು ವಿಧಿಸಿರುವ ಪರಿಷ್ಕರಣಾ ಶುಲ್ಕ, ಕಾನೂನು ಶುಲ್ಕ , ಏಕಕಾಲಿಕ ಸಾಲ ವಿತರಣಾ ಶುಲ್ಕ ಮತ್ತು ಇತರೆ ಶುಲ್ಕಗಳಮರುಪಾವತಿ**<br><br>ದಿನಾಂಕ:01/04/2017ರಿಂದ ಮೊದಲ ಬಾರಿಗೆ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರು ಸ್ಥಾಪಿಸುವ ಸಣ್ಣ ಮತ್ತು ಅತೀ ಸಣ್ಣ ಘಟಕಗಳೂ ಸಾಲ ಪಡೆಯುವ ಸಂದರ್ಭದಲ್ಲಿ ಕೆ.ಎಸ್.ಎಫ್ಸಿ ಮತ್ತು ಇತರೇ ಹಣಕಾಸು ಸಂಸ್ಥೆಯವರು ವಿಧಿಸಿರುವ ಪರಿಷ್ಕರಣಾ ಶುಲ್ಕ, ಕಾನೂನು ಶುಲ್ಕ, ಏಕ ಕಾಲಿಕ ಸಾಲವಿತರಣಾ ಶುಲ್ಕ ಮತ್ತು ಇತರೆ ಶುಲ್ಕಗಳನ್ನು ಭರಿಸಲಾಗುತ್ತಿದೆ. (ಅನುಬಂಧ–07 ರಲ್ಲಿ ಲಗತ್ತಿಸಿದೆ)<br><br>• **ವಿದ್ಯುಚ್ಛಕ್ತಿ ಸಹಾಯಧನ:**<br>ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ಯಮಗಳು ದಿನಾಂಕ:-01/04/2017 ರಿಂದ ಪ್ರಾರಂಭವಾಗಿರುವ ಹೊಸ ಸಣ್ಣ ಮತ್ತು ಅತೀ ಸಣ್ಣ ಕೈಗಾರಿಕಾ ಘಟಕಗಳಿಗೆ ಮೊದಲ 5 ವರ್ಷಗಳ ಅವಧಿಗೆ ಪ್ರತಿ ಯುನಿಟ್‌ಗೆ ರೂ.2 ರಂತೆ ವಿದ್ಯುಚ್ಛಕ್ತಿ ಸಹಾಯಧನ ನೀಡಲಾಗುತ್ತಿದೆ. (ಅನುಬಂಧ- 08 ರಲ್ಲಿ ಲಗತ್ತಿಸಿದೆ)<br><br>**<u>ತೆಂಗಿನ ನಾರಿನ ವಲಯಕ್ಕೆ ಸಂಬಂಧಿಸಿದ ಯೋಜನೆಗಳು</u>**<br><br>**ಅ)ತೆಂಗಿನ ನಾರಿನ ವಲಯದ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಘಟಕಗಳಿಗೆ ಮಾರುಕಟ್ಟೆ ಅಭಿವೃದ್ಧಿ ಸಹಾಯಧನ**<br>ತೆಂಗಿನ ನಾರಿನ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳು ಹಿಂದಿನ 3 ವರ್ಷಗಳಲ್ಲಿ ನಡೆಸಿದ ವಹಿವಾಟಿನ ಸರಾಸರಿಯಲ್ಲಿ ಶೇ.10 ರಷ್ಟು ಗರಿಷ್ಠ (ರೂ.25.00 ಲಕ್ಷ) ಮಾರುಕಟ್ಟೆ ಅಭಿವೃದ್ಧಿ ಸಹಾಯಧನವನ್ನು ನೀಡಲಾಗುತ್ತಿದ್ದೆ. ಸದರಿ ಅನುದಾನವನ್ನು ಪ್ರತಿ ಘಟಕವು ಐದು ವರ್ಷಗಳ ಅವಧಿವರೆಗೆ ಪಡೆಯಬಹುದಾಗಿದೆ. (ಅನುಬಂಧ–09 ರಲ್ಲಿ ಲಗತ್ತಿಸಿದೆ)<br><br>**ಆ)ತೆಂಗಿನ ನಾರಿನ ವಲಯದ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಘಟಕಗಳಲ್ಲಿ ಕಾರ್ಯನಿರ್ವಹಿಸುವ ಕುಶಲಕರ್ಮಿಗಳಿಗೆ ಅನುರೂಪ ವೇತನ**<br><br>ತೆಂಗಿನ ನಾರಿನ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ತೆಂಗಿನ ನಾರಿನ ಕುಶಲಕರ್ಮಿಗಳಿಗೆ ಪ್ರೋತ್ಸಾಹ ನೀಡಲು ಈ ಯೋಜನೆಯನ್ನು ಜಾರಿಗೆತರಲಾಗಿದ್ದು, ವಾರ್ಷಿಕ ಕನಿಷ್ಠ 120 ದಿನಗಳು ಕಾರ್ಯನಿರ್ವಹಿಸುವ ಕುಶಲಕರ್ಮಿಗಳಿಗೆ ರೂ.10,000/-ಗಳಂತೆ ಅನುರೂಪ ವೇತನವನ್ನು ಸರ್ಕಾರದ ವತಿಯಿಂದ ಬಿಡುಗಡೆ ಮಾಡಲಾಗುತ್ತದೆ. (ಅನುಬಂಧ –10 ರಲ್ಲಿ ಲಗತ್ತಿಸಿದೆ)<br><br>**ಕಲ್ಪವೃಕ್ಷ ಕಾಯಕ ಯೋಜನೆ: (ಯೋಜನಾ ಅವಧಿ 2020-21 ರಿಂದ 2022-23)**<br>ತೆಂಗಿನ ನಾರಿನ ಉತ್ಪಾದನಾ ಘಟಕಗಳಿಗೆ ಪ್ರೋತ್ಸಾಹ ನೀಡಲು ಸಹಾಯಧನವನ್ನು ಬಿಡುಗಡೆ ಮಾಡಲಾಗುತ್ತಿತ್ತು ಈ ಯೋಜನೆ ಮುಕ್ತಾಯಗೊಂಡಿದ್ದು ಜಿಲ್ಲಾವಾರು ಮತ್ತು ವರ್ಷವಾರು ವಿವರಗಳನ್ನು ಅನುಬಂಧ–11 ರಲ್ಲಿ ಲಗತ್ತಿಸಿದೆ. |

(ಉ) ದೇಶದಲ್ಲಿ ಜಿ.ಎಸ್.ಟಿ ಜಾರಿಗೆ ಬಂದ ನಂತರ ವ್ಯವಹಾರಗಳು ಆನ್‌ಲೈನ್ ಮುಖಾಂತರ ನಡೆಯಲು ಪ್ರಾರಂಭವಾಗಿದ್ದು, ಕೊರೋನಾ ಸಮಯದ ಲಾಕ್‌ಡೌನ್‌ನಿಂದ ಸೂಕ್ಷ್ಮ ಸಣ್ಣ ಮತ್ತು ಮಧ್ಯಮ ಉದ್ಯಮಗಳು ಸಂಕಷ್ಟ ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಸಂಕಷ್ಟ ಮತ್ತು ಸಮಸ್ಯೆಗಳನ್ನು ಬಗೆ ಹರಿಸಲು ಈ ಉದ್ಯಮಗಳನ್ನು ಪುನಶ್ಚೇತನಗೊಳಿಸಲು ಸರ್ಕಾರಕೈ ಗೊಂಡಿರುವ ಕ್ರಮಗಳೇನು? (ಪೂರ್ಣ ಮಾಹಿತಿ ನೀಡುವುದು)

ಕೊರೋನಾದಿಂದ ಅನೇಕ ಸಣ್ಣ ಉದ್ಯಮಗಳಿಗೆ ತೊಂದರೆಯಾಗಿದ್ದು, ಆ ಸಂದರ್ಭದಲ್ಲಿ ಸಣ್ಣ ಉದ್ದಿಮೆದಾರರಿಗೆ ಪ್ರೋತ್ಸಾಹ ನೀಡಲು ಈ ಕೆಳಗಿನ ಯೋಜನೆಗಳನ್ನು ಜಾರಿಗೊಳಿಸಲಾಗಿದೆ.
ಕೇಂದ್ರ ಸರ್ಕಾರ ಘೋಷಿಸಿರುವ "ಆತ್ಮ ನಿರ್ಭರ ಭಾರತ ಅಭಿಯಾನ" ದ ಅಡಿಯಲ್ಲಿ ಅತೀ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳನ್ನು ಪುನಶ್ಚೇತನಗೊಳಿಸಲು ಮತ್ತು ಉದ್ಯಮಗಳಿಗೆ ಆರ್ಥಿಕ ನೆರವು ನೀಡುವ ಯೋಜನೆಯಲ್ಲಿ ಈ ಕೆಳಗಿನ ನೆರವು ದೊರೆತಿದೆ.

ಭಾರತ ಸರ್ಕಾರವು "ಇ.ಸಿ.ಎಲ್.ಜಿ" - ಎಮರ್ಜೆನ್ಸಿ ಕ್ರೆಡಿಟ್ ಲೈನ್ ಗ್ಯಾರಂಟಿ ಯೋಜನೆಯನ್ನು ಜಾರಿಗೆ ತಂದಿದ್ದು ಇದರನ್ವಯ ಫೆಬ್ರವರಿ 2020ರ ಅಂತ್ಯಕ್ಕೆ ಬ್ಯಾಂಕ್‌ಗಳಲ್ಲಿ ಬಾಕಿ ಇರುವ ಎಂ.ಎಸ್.ಎಂ.ಇ ಘಟಕಗಳ ಸಾಲದ ಮೊತ್ತಕ್ಕೆ ಶೇ 20% ರಷ್ಟು ಹೆಚ್ಚುವರಿ ಸಾಲವನ್ನು ಯಾವುದೇ ಹೆಚ್ಚುವರಿ ಖಾತರಿ ಇಲ್ಲದೇ ನೀಡುವ ಯೋಜನೆಯನ್ನು ಜಾರಿಗೆ ತಂದಿರುತ್ತದೆ.
ಕೊರೋನದಿಂದ ಸಂಕಷ್ಟದಲ್ಲಿರುವ ಸಣ್ಣ ಕೈಗಾರಿಕೆಗಳಿಗೆ ರಾಜ್ಯ ಸರ್ಕಾರದಿಂದ ಈ ಕೆಳಗಿನ ಯೋಜನೆ ರೂಪಿಸಲಾಗಿರುತ್ತದೆ.

1. ಇಂಧನ ಇಲಾಖೆಯು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಏಪ್ರಿಲ್ ಮತ್ತು ಮೇ 2020 ತಿಂಗಳ ಬೇಡಿಕೆ ಶುಲ್ಕ ಮತ್ತು ಸ್ಥಿರ ಶುಲ್ಕವನ್ನು ಮನ್ನಾ ಮಾಡಿರುತ್ತದೆ.
2. ಇಂಧನ ಇಲಾಖೆಯು ವಿದ್ಯುತ್ ಬಿಲ್‌ನ್ನು ಪ್ರಾಮಾಣಿಕವಾಗಿ ನಿಗದಿತ ಅವಧಿಯೊಳಗೆ ಪಾವತಿಸುವ ಕೈಗಾರಿಕೆಗಳಿಗೆ ರಿಯಾಯಿತಿಯನ್ನು ನೀಡಿರುತ್ತದೆ. ಹೆಚ್‌ಟಿ ಗರಿಷ್ಟ ಮಿತಿ ರೂ.1 ಲಕ್ಷ, ಎಲ್‌ಟಿ ಗರಿಷ್ಟ ಮಿತಿ ರೂ. 10,000/-

| | |
|---|---|
| 1 ರಿಂದ 5 ದಿನದೊಳಗೆ ಪಾವತಿಸಿದಲ್ಲಿ | ಶೇ.1% ರಿಯಾಯಿತಿ |
| 6 ರಿಂದ 15 ದಿನದೊಳಗೆ ಪಾವತಿಸಿದಲ್ಲಿ | ಶೇ 0.5% ರಿಯಾಯಿತಿ |
| 15 ರಿಂದ 30 ದಿನದೊಳಗೆ ಪಾವತಿಸಿದಲ್ಲಿ | ಯಾವುದೇ ರಿಯಾಯಿತಿ ಇರುವುದಿಲ್ಲ |

3. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಉದ್ಯಮಶೀಲರು ತಮಗೆ ಹಂಚಿಕೆಯಾದ ನಿವೇಶನಗಳ ಮಾರ್ಚ್, ಏಪ್ರಿಲ್ ಮತ್ತು ಮೇ 2020 ತಿಂಗಳ ಕಂತು ಪಾವತಿಸದ್ದಲ್ಲಿ ಆ ಪಾವತಿಯನ್ನು ಕ್ರಮವಾಗಿ 3 ತಿಂಗಳು ಮುಂದೂಡಲಾಗಿದೆ ಮತ್ತು ಈ ಮೊತ್ತಕ್ಕೆ ಯಾವುದೇ ಬಡ್ಡಿಯನ್ನು ವಿಧಿಸುವುದಿಲ್ಲ.
4. ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮವು ಉದ್ಯಮಶೀಲರು ತಮಗೆ ಹಂಚಿಕೆಯಾದ ನಿವೇಶನಗಳ ಕಂತು, ಮಳಿಗೆಗಳ ಬಾಡಿಗೆ ಮತ್ತು ನೀರಿನ ಶುಲ್ಕಗಳ ಏಪ್ರಿಲ್ ಮತ್ತು ಮೇ 2020 ತಿಂಗಳುಗಳ ಕಂತನ್ನು ಈ ಕೆಳಗಿನಂತೆ ಪಾವತಿಸಲು ಅವಕಾಶ ಕಲ್ಪಿಸಲಾಗಿದೆ. ಇದಕ್ಕೆ ಯಾವುದೇ ಬಡ್ಡಿಯನ್ನು ವಿಧಿಸಲಾಗುವುದಿಲ್ಲ.

| | |
|---|---|
| ಏಪ್ರೀಲ್ 2020 ಕಂತು | ಜೂನ್ 2020 ತಿಂಗಳ ಕಂತಿನ ಜೊತೆ ಪಾವತಿಸತಕ್ಕದ್ದು |
| ಮೇ 2020 ಕಂತು | ಜುಲೈ 2020 ತಿಂಗಳ ಕಂತಿನ ಜೊತೆ ಪಾವತಿಸತಕ್ಕದ್ದು |
| ಜೂನ್ 2020 ಕಂತು | ಆಗಸ್ಟ್ 2020 ತಿಂಗಳ ಕಂತಿನ ಜೊತೆ ಪಾವತಿಸತಕ್ಕದ್ದು |

| | | |
|---|---|---|
| | | ಕೊರೋನಾ 2ನೇ ಅಲೆಯ ನಂತರ ರಾಜ್ಯ ಸರ್ಕಾರದ ಇಂಧನ ಇಲಾಖೆಯು ದಿನಾಂಕ: 21.06.2021ರ ಆದೇಶದಂತೆ, ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಪಾವತಿಸಬೇಕಾದ ಮೇ ಮತ್ತು ಜೂನ್ 2021 ತಿಂಗಳ ಬೇಡಿಕೆ / ನಿಗದಿತ ಶುಲ್ಕವನ್ನು ಮನ್ನಾ ಮಾಡಿರುತ್ತದೆ. |

**ಸಿಐ 147 ಎಸ್‌ಎಸ್‌ಐ 2024**

**(ಶರಣಬಸಪ್ಪ ದರ್ಶನಾಪೂರ)**
ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ
ಉದ್ದಿಮೆಗಳ ಸಚಿವರು

ಅನುಬಂಧ-1 LCQ - 956

## Details of number of MSMEs registered under Government of India Udyam Portal (from July 2020 to November 2024)

| District | Medium | | Micro | | Small | | Total Registered Enterprises | Total Employment |
|---|---|---|---|---|---|---|---|---|
| | Registered Enterprises | Employment | Registered Enterprises | Employment | Registered Enterprises | Employment | | |
| BAGALKOT | 18 | 667 | 44246 | 725720 | 452 | 5895 | 44716 | 732282 |
| BALLARI | 86 | 5358 | 40704 | 522388 | 1028 | 22592 | 41818 | 550338 |
| BELAGAVI | 90 | 9648 | 121621 | 852493 | 1414 | 38011 | 123125 | 900152 |
| BENGALURU (RURAL) | 177 | 31605 | 83795 | 799807 | 1612 | 67862 | 85584 | 899274 |
| BENGALURU (URBAN) | 1675 | 343388 | 431336 | 2931185 | 15174 | 633565 | 448185 | 3908138 |
| BIDAR | 33 | 1305 | 30850 | 777025 | 395 | 6098 | 31278 | 784428 |
| CHAMARAJNAGAR | 4 | 962 | 17653 | 129561 | 211 | 2434 | 17868 | 132957 |
| CHIKBALLAPUR | 15 | 833 | 28015 | 261660 | 395 | 5563 | 28425 | 268056 |
| CHIKKAMAGALURU | 17 | 434 | 26925 | 192497 | 420 | 6212 | 27362 | 199143 |
| CHITRADURGA | 24 | 890 | 29666 | 399991 | 478 | 6717 | 30168 | 407598 |
| DAKSHIN KANNAD | 106 | 10809 | 67787 | 536909 | 1362 | 41942 | 69255 | 589660 |
| DAVANGERE | 27 | 2966 | 41057 | 449799 | 698 | 10903 | 41782 | 463668 |
| DHARWAD | 95 | 8337 | 66804 | 451050 | 1179 | 27108 | 68078 | 486495 |
| GADAG | 8 | 290 | 24372 | 236385 | 324 | 3282 | 24704 | 239957 |
| HASSAN | 31 | 834 | 43112 | 762041 | 747 | 13798 | 43890 | 776673 |
| HAVERI | 20 | 707 | 34208 | 281229 | 479 | 5779 | 34707 | 287715 |
| KALABURAGI | 41 | 2848 | 37926 | 410367 | 763 | 10679 | 38730 | 423894 |
| KODAGU | 14 | 604 | 15686 | 86639 | 245 | 2657 | 15945 | 89900 |
| KOLAR | 37 | 2772 | 32556 | 437797 | 556 | 13287 | 33149 | 453856 |
| KOPPAL | 33 | 1303 | 33524 | 300669 | 691 | 10668 | 34248 | 312640 |
| MANDYA | 14 | 448 | 38632 | 339988 | 533 | 10167 | 39179 | 350603 |
| MYSURU | 89 | 9060 | 92281 | 727541 | 1490 | 53143 | 93860 | 789744 |
| RAICHUR | 54 | 1321 | 30232 | 284503 | 864 | 9914 | 31150 | 295738 |
| RAMANAGARA | 27 | 5847 | 30594 | 276533 | 397 | 11360 | 31018 | 293740 |
| SHIVAMOGGA | 38 | 3954 | 46751 | 372040 | 742 | 16027 | 47531 | 392021 |
| TUMAKURU | 50 | 6021 | 62485 | 631094 | 977 | 19239 | 63512 | 656354 |
| UDUPI | 58 | 10686 | 41048 | 176404 | 761 | 23095 | 41867 | 210185 |
| UTTAR KANNAD | 9 | 494 | 39332 | 171960 | 409 | 7181 | 39750 | 179635 |
| VIJAYANAGAR | 2 | 104 | 12709 | 66888 | 177 | 2487 | 12888 | 69479 |
| VIJAYAPURA | 35 | 828 | 42307 | 316090 | 639 | 14431 | 42981 | 331349 |
| YADGIR | 14 | 515 | 17612 | 225404 | 276 | 3195 | 17902 | 229114 |
| **Grand Total** | **2941** | **465838** | **1705826** | **15133657** | **35888** | **1105291** | **1744655** | **16704786** |

ಅನುಬಂಧ-II Lcq 956

# 3 YEARS PMEGP PROGRESS

| # | DISTRICTS | 2023-24 | | | 2022-23 | | | 2021-22 | | |
|---|---|---|---|---|---|---|---|---|---|---|
| | | PHY | FIN (IN Lakh) | EMP | PHY | FIN (IN Lakh) | EMP | PHY | FIN (IN Lakh) | EMP |
| 1) | BAGALKOT | 191 | 482.53 | 1528 | 347 | 781.49 | 2776 | 391 | 834.53 | 3128 |
| 2) | BANGALORE | 241 | 1632.19 | 1928 | 264 | 1319.40 | 2112 | 298 | 1246.53 | 2384 |
| 3) | BANGALORE RURAL | 94 | 552.26 | 752 | 82 | 322.14 | 656 | 99 | 403.92 | 792 |
| 4) | BELGAUM | 378 | 1349.87 | 3024 | 708 | 2068.44 | 5664 | 625 | 1665.98 | 5000 |
| 5) | BELLARY | 182 | 342.92 | 1456 | 347 | 668.08 | 2776 | 343 | 620.00 | 2744 |
| 6) | BIDAR | 110 | 354.02 | 880 | 127 | 355.71 | 1016 | 112 | 324.33 | 896 |
| 7) | BIJAPUR | 202 | 399.61 | 1616 | 391 | 758.73 | 3128 | 426 | 870.85 | 3408 |
| 8) | CHAMARAJNAGAR | 90 | 270.02 | 720 | 78 | 172.45 | 624 | 80 | 185.84 | 640 |
| 9) | CHIKKBALLAPUR | 63 | 306.88 | 504 | 74 | 389.39 | 592 | 91 | 383.21 | 728 |
| 10) | CHIKMAGALUR | 125 | 406.22 | 1000 | 170 | 498.49 | 1360 | 114 | 321.86 | 912 |
| 11) | CHITRADURGA | 61 | 176.28 | 488 | 114 | 346.55 | 912 | 88 | 321.07 | 704 |
| 12) | DAKSHIN KANNAD | 322 | 1274.85 | 2576 | 329 | 1143.22 | 2632 | 438 | 1420.10 | 3504 |
| 13) | DAVANGERE | 88 | 345.09 | 704 | 117 | 430.70 | 936 | 115 | 450.51 | 920 |
| 14) | DHARWAD | 109 | 279.03 | 872 | 191 | 383.78 | 1528 | 157 | 288.70 | 1256 |
| 15) | GADAG | 59 | 168.82 | 472 | 94 | 245.15 | 752 | 109 | 255.17 | 872 |
| 16) | GULBARGA | 50 | 125.72 | 400 | 85 | 141.42 | 680 | 119 | 207.76 | 952 |
| 17) | HASSAN | 75 | 279.34 | 600 | 139 | 422.59 | 1112 | 130 | 332.92 | 1040 |
| 18) | HAVERI | 98 | 227.97 | 784 | 178 | 392.98 | 1424 | 257 | 536.17 | 2056 |
| 19) | KODAGU | 61 | 214.05 | 488 | 69 | 209.68 | 552 | 74 | 199.90 | 592 |
| 20) | KOLAR | 63 | 251.54 | 504 | 95 | 268.74 | 760 | 55 | 205.12 | 440 |
| 21) | KOPPAL | 52 | 123.11 | 416 | 91 | 226.81 | 728 | 90 | 157.40 | 720 |
| 22) | MANDYA | 92 | 373.69 | 736 | 122 | 433.50 | 976 | 146 | 461.56 | 1168 |
| 23) | MYSORE | 102 | 331.34 | 816 | 118 | 366.81 | 944 | 161 | 452.27 | 1288 |
| 24) | RAICHUR | 67 | 256.00 | 536 | 86 | 248.04 | 688 | 118 | 312.23 | 944 |
| 25) | RAMANAGARA | 105 | 274.52 | 840 | 95 | 292.20 | 760 | 84 | 249.76 | 672 |
| 26) | SHIMOGA | 235 | 872.05 | 1880 | 337 | 1060.87 | 2696 | 247 | 770.76 | 1976 |
| 27) | TUMKUR | 95 | 388.84 | 760 | 110 | 378.85 | 880 | 149 | 416.80 | 1192 |
| 28) | UDUPI | 260 | 952.19 | 2080 | 319 | 982.51 | 2552 | 314 | 959.60 | 2512 |
| 29) | UTTARA KANNADA | 131 | 348.96 | 1048 | 231 | 604.14 | 1848 | 271 | 694.19 | 2168 |
| 30) | VIJAYANAGARA | 27 | 74.01 | 216 | 10 | 20.26 | 80 | 0 | 0.00 | 0 |
| 31) | YADAGIRI | 75 | 156.62 | 600 | 94 | 173.80 | 752 | 163 | 224.98 | 1304 |
| | **Total** | **3903** | **13590.54** | **31224** | **5612** | **16106.92** | **44896** | **5864** | **15774.02** | **46912** |

# ಅನುಬಂಧ - 3 (LCQ - 956)

ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿ 2021-22 ರಿಂದ 2023-24ರವರೆಗೆ ಕೆ.ಐ.ಎ.ಡಿ.ಬಿ ವತಿಯಿಂದ ಬಿಡುಗಡೆ ಮಾಡಿರುವ 75% ಕೈಗಾರಿಕಾ ನಿವೇಶನ ಸಹಾಯಧನ ಜಿಲ್ಲಾವಾರು ವಿವರಗಳು

ರೂ. ಲಕ್ಷಗಳಲ್ಲಿ

| # | District | 2021-22 | | | | 2022-23 | | | | 2023-24 | | | | TOTAL | | | |
|---|---|---|---|---|---|---|---|---|---|---|---|---|---|---|---|---|---|
| | | SCP | | TSP | | SCP | | TSP | | SCP | | TSP | | SCP | | TSP | |
| | | NO | AMT. | NO | AMT. | NO | AMT. | NO | AMT. | NO | AMT. | NO | AMT. | NO | AMT. | NO | AMT. |
| 1 | Belagavi | 13 | 183.11 | | - | | - | | - | 1 | 46.50 | | - | 14 | 229.61 | 0 | - |
| 2 | Bengaluru Rural | 7 | 1,378.62 | 2 | 166.50 | 68 | 15,833.72 | 7 | 2,317.61 | 60 | 14,498.97 | 18 | 3,536.32 | 135 | 31,711.30 | 27 | 6,020.42 |
| 3 | Bengaluru Urban | 1 | 58.57 | | - | | - | | - | | - | | - | 1 | 58.57 | 0 | - |
| 4 | Chamarajanagara | 3 | 127.38 | | - | | - | | - | | - | | - | 3 | 127.38 | 0 | - |
| 5 | Chikkaballapura | | - | | - | 9 | 609.53 | 3 | 347.76 | 2 | 378.00 | 1 | 107.59 | 11 | 987.53 | 4 | 455.35 |
| 6 | Dharwad | 19 | 414.30 | | - | 3 | 293.94 | | - | | - | | - | 22 | 708.24 | 0 | - |
| 7 | Hassan | 4 | 40.50 | | - | 1 | 34.67 | | - | | - | | - | 5 | 75.17 | 0 | - |
| 8 | Kolar | | - | | - | 1 | 121.50 | | - | | - | | - | 1 | 121.50 | 0 | - |
| 9 | Mysuru | | - | | - | 3 | 125.45 | | - | | - | 1 | 18.27 | 3 | 125.45 | 1 | 18.27 |
| 10 | Ramanagara | | - | | - | 8 | 638.82 | | - | 15 | 1,294.60 | 5 | 455.63 | 23 | 1,933.42 | 5 | 455.63 |
| 11 | Shivamooga | | - | | - | | - | | - | | - | 1 | 26.73 | 0 | - | 1 | 26.73 |
| 12 | Tumakuru | 4 | 101.44 | 2 | 108.28 | 16 | 1,281.22 | 1 | 157.88 | 7 | 312.41 | 3 | 74.25 | 27 | 1,695.06 | 6 | 340.41 |
| 13 | Udupi | 7 | 249.95 | 7 | 110.25 | | - | | - | 1 | 12.38 | | - | 8 | 262.33 | 7 | 110.25 |
| 14 | Yadgir | | - | | - | 1 | 14.06 | | - | | - | | - | 1 | 14.06 | 0 | - |
| | Grand Total | 58 | 2,553.87 | 11 | 385.03 | 110 | 18,952.91 | 11 | 2,823.24 | 86 | 16,542.85 | 29 | 4,218.78 | 254 | 38,049.63 | 51 | 7,427.05 |

## ಅನುಬಂಧ - 04 (LCQ - 956)

ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿ 2021-22 ರಿಂದ 2023-24ರವರೆಗೆ ಕೆಎಸ್‌ಎಸ್‌ಐಡಿಸಿ ವತಿಯಿಂದ ಬಿಡುಗಡೆ ಮಾಡಿರುವ 75% ಕೈಗಾರಿಕಾ ನಿವೇಶನ ಸಹಾಯಧನ ಜಿಲ್ಲಾವಾರು ವಿವರಗಳು

ರೂ. ಲಕ್ಷಗಳಲ್ಲಿ

| # | District | 2022-23 | | | |
|---|---|---|---|---|---|
| | | SCP | | TSP | |
| | | NO | AMT. | NO | AMT. |
| 1 | ಬೆಂಗಳೂರು ಗ್ರಾಮಾಂತರ | 6 | 140.91 | 7 | 138.09 |
| 2 | ಧಾರವಾಡ | 32 | 1095.75 | 11 | 137.52 |
| 3 | ಬೆಳಗಾವಿ | 46 | 563.62 | 8 | 130.83 |
| 4 | ಹಾವೇರಿ | 2 | 15 | 3 | 26.47 |
| 5 | ಗದಗ | 2 | 25.73 | | |
| 6 | ದಾವಣಗೆರೆ | 21 | 663.82 | 12 | 184.45 |
| 7 | ಚಿತ್ರದುರ್ಗ | 16 | 319.79 | 7 | 219.75 |
| 8 | ಬೀದರ್ | 18 | 110.21 | 1 | 11.61 |
| 9 | ಮಂಡ್ಯ | 14 | 166.2 | | |
| 10 | ಕಲಬುರಗಿ | 27 | 46.57 | 3 | 6.82 |
| 11 | ಕೊಪ್ಪಳ | 5 | 62.98 | | |
| 12 | ರಾಯಚೂರು | 1 | 2.91 | | |
| 13 | ವಿಯಜಪುರ | 2 | 7.56 | | |
| 14 | ಶಿವಮೊಗ್ಗ | 78 | 1774.44 | 8 | 114.22 |
| 15 | ಚಿಕ್ಕಮಗಳೂರು | 4 | 59.14 | | |
| 16 | ಬೆಂಗಳೂರು ನಗರ | 4 | 30.01 | | |
| 17 | ಮೈಸೂರು | 4 | 12.31 | | |
| 18 | ಚಾಮರಾಜನಗರ | 3 | 20.8 | | |
| 19 | ತುಮಕೂರು | 42 | 706.49 | | |
| 20 | ಚಿಕ್ಕಬಳ್ಳಾಪುರ | 7 | 129.9 | | |
| | ಒಟ್ಟು | **334** | **5954.14** | 60 | 969.76 |

**ಟಿಪ್ಪಣಿ - ಸದರಿ ಯೋಜನೆಯಲ್ಲಿ 2021-22 ಮತ್ತು 2023-24 ಸಾಲಿಗೆ ಯಾವುದೇ ಆರ್ಥಿಕ ಸೌಲಭ್ಯ ಮಂಜೂರಾತಿಯಾಗಿರುವುದಿಲ್ಲ.**

# ಅನುಬಂಧ - 05 (LCQ - 956)

2021-22 ನೇ ಸಾಲಿನಿಂದ 2023-24 ನೇ ಸಾಲಿನವರೆಗೂ ವಿ.ಫ.ಯೋ ಮತ್ತು ಗಿ.ಉ.ಯೋಯಡಿ ಬಿಡುಗಡೆ ಮಾಡಿರುವ ಸಹಾಯಧನದ ಜಿಲ್ಲಾವಾರು ವಿವರಗಳು

ರೂ. ಲಕ್ಷಗಳಲ್ಲಿ

| # | ಜಿಲ್ಲೆ | 2021-22 | | | | 2022-23 | | | | 2023-24 | | | | ಒಟ್ಟು | | | |
|---|---|---|---|---|---|---|---|---|---|---|---|---|---|---|---|---|---|
| | | ವಿ.ಫ.ಯೋ | | ಗಿ.ಉ.ಯೋ | | ವಿ.ಫ.ಯೋ | | ಗಿ.ಉ.ಯೋ | | ವಿ.ಫ.ಯೋ | | ಗಿ.ಉ.ಯೋ | | ವಿ.ಫ.ಯೋ | | ಗಿ.ಉ.ಯೋ | |
| | | ಸಂ | ಸಹಾಯ ಧನ | ಸಂ | ಸಹಾಯ ಧನ | ಸಂ | ಸಹಾಯ ಧನ | ಸಂ | ಸಹಾಯ ಧನ | ಸಂ | ಸಹಾಯ ಧನ | ಸಂ | ಸಹಾಯ ಧನ | ಸಂ | ಸಹಾಯ ಧನ | ಸಂ | ಸಹಾಯ ಧನ |
| 1 | ಉಡುಪಿ | | | | | | | | | | | 1 | 5.00 | 0 | - | 1 | 5.00 |
| 2 | ಉತ್ತರ ಕನ್ನಡ | 2 | 5.40 | | | | | | | | | | | 2 | 5.40 | 0 | - |
| 3 | ಕಲಬುರಗಿ | 2 | 6.80 | | | | | | | 1 | 1.33 | | | 3 | 8.13 | 0 | - |
| 4 | ಕೊಡಗು | | | | | 4 | 14.00 | 1 | 3.60 | | | | | 4 | 14.00 | 1 | 3.60 |
| 5 | ಕೊಪ್ಪಳ | 7 | 21.22 | 6 | 16.50 | 12 | 30.36 | 14 | 40.41 | 2 | 4.44 | | | 21 | 56.02 | 20 | 56.91 |
| 6 | ಗದಗ | 5 | 11.01 | 3 | 11.00 | | | 1 | 3.00 | 2 | 10.00 | | | 7 | 21.01 | 4 | 14.00 |
| 7 | ಚಾಮರಾಜನಗರ | 4 | 15.30 | | | | | | | | | | | 4 | 15.30 | 0 | - |
| 8 | ಚಿಕ್ಕಬಳ್ಳಾಪುರ | 6 | 25.70 | 2 | 7.17 | 2 | 10.00 | 1 | 2.83 | | | | | 8 | 35.70 | 3 | 10.00 |
| 9 | ಚಿಕ್ಕಮಗಳೂರು | 3 | 11.00 | 3 | 9.50 | 8 | 39.50 | 2 | 10.00 | | | | | 11 | 50.50 | 5 | 19.50 |
| 10 | ಚಿತ್ರದುರ್ಗ | | | | | 4 | 16.60 | 5 | 18.60 | | | 2 | 8.00 | 4 | 16.60 | 7 | 26.60 |
| 11 | ತುಮಕೂರು | 7 | 28.29 | 7 | 22.87 | 17 | 61.98 | 7 | 26.83 | 2 | 10.00 | | | 26 | 100.27 | 14 | 49.70 |
| 12 | ದಕ್ಷಿಣ ಕನ್ನಡ | | | 2 | 1.30 | 1 | 5.00 | | | 2 | 8.30 | 1 | 5.00 | 3 | 13.30 | 3 | 6.30 |
| 13 | ದಾವಣಗೆರೆ | 19 | 77.88 | 20 | 94.60 | 14 | 59.34 | 1 | 5.00 | | | | | 33 | 137.22 | 21 | 99.60 |
| 14 | ಧಾರವಾಡ | 6 | 28.96 | | | 8 | 32.95 | 2 | 10.00 | | | | | 14 | 61.91 | 2 | 10.00 |
| 15 | ಬಳ್ಳಾರಿ | 6 | 19.10 | 5 | 19.00 | 4 | 12.34 | 3 | 11.00 | 1 | 4.80 | 1 | 5.00 | 11 | 36.24 | 9 | 35.00 |
| 16 | ಬಾಗಲಕೋಟೆ | 72 | 243.85 | 36 | 165.96 | 13 | 58.60 | 2 | 5.40 | | | | | 85 | 302.45 | 38 | 171.36 |
| 17 | ಬೀದರ್ | 10 | 36.25 | 8 | 28.23 | 11 | 39.38 | 5 | 17.49 | 13 | 49.34 | 8 | 33.40 | 34 | 124.97 | 21 | 79.12 |
| 18 | ಬೆಂಗಳೂರು ಗ್ರಾ | 1 | 5.00 | | | 1 | 1.33 | | | 1 | 3.67 | | | 3 | 10.00 | 0 | - |
| 19 | ಬೆಂಗಳೂರು ನಗರ | | | | | 4 | 20.00 | | | 2 | 10.00 | | | 6 | 30.00 | 0 | - |
| 20 | ಬೆಳಗಾವಿ | 29 | 87.79 | 7 | 17.11 | 8 | 30.12 | 2 | 10.00 | | | | | 37 | 117.91 | 9 | 27.11 |
| 21 | ಮಂಡ್ಯ | 2 | 6.00 | | | | | | | | | | | 2 | 6.00 | 0 | - |
| 22 | ಮೈಸೂರು | | | 6 | 25.40 | 14 | 61.58 | 5 | 16.55 | | | 2 | 8.60 | 14 | 61.58 | 13 | 50.55 |
| 23 | ಯಾದಗಿರಿ | 1 | 1.32 | | | | | | | | | | | 1 | 1.32 | 0 | - |
| 24 | ರಾಮನಗರ | | | | | 1 | 5.00 | | | | | | | 1 | 5.00 | 0 | - |
| 25 | ರಾಯಚೂರು | 2 | 5.40 | 1 | 1.60 | | | | | | | | | 2 | 5.40 | 1 | 1.60 |
| 26 | ವಿಜಯನಗರ | | | | | | | | | | | | | 0 | - | 0 | - |
| 27 | ವಿಜಯಪುರ | 21 | 61.19 | | | 1 | 4.80 | | | | | | | 22 | 65.99 | 0 | - |
| 28 | ಶಿವಮೊಗ್ಗ | 18 | 67.54 | 1 | 1.80 | 6 | 24.23 | 1 | 5.00 | 3 | 9.79 | | | 27 | 101.56 | 2 | 6.80 |
| 29 | ಹಾವೇರಿ | 3 | 11.00 | 1 | 1.49 | | | | | | | | | 3 | 11.00 | 1 | 1.49 |
| 30 | ಹಾಸನ | 1 | 4.80 | 1 | 2.40 | 8 | 31.39 | 1 | 5.00 | 6 | 23.33 | | | 15 | 59.52 | 2 | 7.40 |
| | Grand Total | 227 | 780.79 | 109 | 425.93 | 141 | 558.50 | 53 | 190.71 | 35 | 135.00 | 15 | 65.00 | 403 | 1,474.29 | 177 | 681.63 |

# ಅನುಬಂಧ - 06 (LCQ - 956)

**2021-22 ರಿಂದ 2023-24ನೇ ಸಾಲಿನ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿ ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ ಬಿಡುಗಡೆ ಮಾಡಿರುವ ಜಿಲ್ಲಾವಾರು ಫಲಾನುಭವಿಗಳ ವಿವರಗಳು**

ರೂ. ಲಕ್ಷಗಳಲ್ಲಿ

| # | ಜಿಲ್ಲೆಯ ಹೆಸರು | 2021-22 | | | | 2022-23 | | | | 2023-24 | | | | ಒಟ್ಟು | | | |
|---|---|---|---|---|---|---|---|---|---|---|---|---|---|---|---|---|---|
| | | ವಿಘಯೋ | | ಗಿಉಯೋ | | ವಿಘಯೋ | | ಗಿಉಯೋ | | ವಿಘಯೋ | | ಗಿಉಯೋ | | ವಿಘಯೋ | | ಗಿಉಯೋ | |
| | | ಸಂ | ಮೊತ್ತ | ಸಂ | ಮೊತ್ತ | ಸಂ | ಮೊತ್ತ | ಸಂ | ಮೊತ್ತ | ಸಂ | ಮೊತ್ತ | ಸಂ | ಮೊತ್ತ | ಸಂ | ಮೊತ್ತ | ಸಂ | ಮೊತ್ತ |
| 1 | ಬೆಂಗಳೂರು ನಗರ | 2 | 66.08 | | | | | | | 1 | 4 | | | 3 | 70.08 | 0 | 0 |
| 2 | ಬೆಂಗಳೂರು ಗ್ರಾ | 1 | 16.43 | 1 | 75.00 | 10 | 452.64 | 5 | 205.25 | | | 1 | 18.5 | 11 | 469.07 | 7 | 298.75 |
| 3 | ಬಾಗಲಕೋಟೆ | | | | | | | | | | | | | 0 | 0 | 0 | 0 |
| 4 | ಬೆಳಗಾವಿ | 1 | 6.35 | | | | | 1 | 17.83 | | | | | 1 | 6.35 | 1 | 17.83 |
| 5 | ಬಳ್ಳಾರಿ | | | | | | | | | | | | | 0 | 0 | 0 | 0 |
| 6 | ಬೀದರ್ | 4 | 65.33 | 2 | 29.16 | 9 | 162.22 | 2 | 29.00 | | | | | 13 | 227.55 | 4 | 58.16 |
| 7 | ವಿಜಯಪುರ | 2 | 28.33 | | | 2 | 84.99 | 1 | 5.42 | | | | | 4 | 113.32 | 1 | 5.42 |
| 8 | ಚಾಮರಾಜನಗರ | | | | | 2 | 88.47 | 1 | 75.00 | | | | | 2 | 88.47 | 1 | 75 |
| 9 | ಚಿಕ್ಕಮಗಳೂರು | | | | | | | | | | | | | 0 | 0 | 0 | 0 |
| 10 | ಚಿಕ್ಕಬಳ್ಳಾಪುರ | | | | | 1 | 65.09 | 1 | 69.06 | | | | | 1 | 65.09 | 1 | 69.06 |
| 11 | ಚಿತ್ರದುರ್ಗ | | | | | 3 | 38.81 | | | | | | | 3 | 38.81 | 0 | 0 |
| 12 | ದಕ್ಷಿಣ ಕನ್ನಡ | | | | | | | | | | | | | 0 | 0 | 0 | 0 |
| 13 | ಧಾರವಾಡ | 7 | 106.82 | 2 | 23.00 | 8 | 157.95 | 3 | 64.23 | | | 1 | 16.3 | 15 | 264.77 | 6 | 103.53 |
| 14 | ದಾವಣಗೆರೆ | 4 | 35.07 | 1 | 23.00 | 3 | 85.99 | 1 | 5.00 | | | | | 7 | 121.06 | 2 | 28 |
| 15 | ಗದಗ | 1 | 24.75 | | | | | | | | | | | 1 | 24.75 | 0 | 0 |
| 16 | ಹಾಸನ | | | | | | | | | | | | | 0 | 0 | 0 | 0 |
| 17 | ಹಾವೇರಿ | | | | | 1 | 7.92 | 1 | 7.35 | | | | | 1 | 7.92 | 1 | 7.35 |
| 18 | ಕಲಬುರಗಿ | 3 | 32.50 | | | | | | | | | | | 3 | 32.5 | 0 | 0 |
| 19 | ಕೊಡಗು | | | | | | | | | | | | | 0 | 0 | 0 | 0 |
| 20 | ಕೋಲಾರ | 2 | 88.11 | 1 | 23.70 | 9 | 207.45 | | | | | | | 11 | 295.56 | 1 | 23.7 |
| 21 | ಕೊಪ್ಪಳ | | | | | | | 1 | 32.66 | | | | | 0 | 0 | 1 | 32.66 |
| 22 | ಮಂಡ್ಯ | | | | | 4 | 43.93 | | | | | | | 4 | 43.93 | 0 | 0 |
| 23 | ಮೈಸೂರು | | | | | 5 | 135.00 | 2 | 30.50 | | | | | 5 | 135 | 2 | 30.5 |
| 24 | ರಾಯಚೂರು | 1 | 11.00 | | | 1 | 54.83 | 1 | 75.00 | | | | | 2 | 65.83 | 1 | 75 |
| 25 | ರಾಮನಗರ | 1 | 15.84 | | | 1 | 11.38 | | | | | | | 2 | 27.22 | 0 | 0 |
| 26 | ಶಿವಮೊಗ್ಗ | | | | | 2 | 56.83 | | | | | | | 2 | 56.83 | 0 | 0 |
| 27 | ತುಮಕೂರು | 5 | 133.01 | 1 | 29.74 | 7 | 218.70 | 3 | 77.13 | | | | | 12 | 351.71 | 4 | 106.87 |
| 28 | ಉಡುಪಿ | | | | | 1 | 19.08 | 1 | 5.92 | | | | | 1 | 19.08 | 1 | 5.92 |
| 29 | ಉತ್ತರ ಕನ್ನಡ | | | | | | | | | | | | | 0 | 0 | 0 | 0 |
| 30 | ಯಾದಗಿರಿ | | | | | | | | | | | | | 0 | 0 | 0 | 0 |
| | ಒಟ್ಟು | 34 | 629.62 | 8 | 203.60 | 69 | 1891.28 | 24 | 699.35 | 1 | 4.00 | 2 | 34.80 | 104 | 2524.9 | 34 | 937.75 |

# ಅನುಬಂಧ - 07(LCQ - 956)

ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿ 2021-22 ರಿಂದ 2023-24ರವರೆಗೆ ಬಿಡುಗಡೆ ಮಾಡಿರುವ ಸಾಲ ಶುಲ್ಕ ಮರುಪಾವತಿ ಮೊತ್ತದ ಜಿಲ್ಲಾವಾರು ವಿವರಗಳು

ರೂ. ಲಕ್ಷಗಳಲ್ಲಿ

| | | 2021-22 | | | | 2022-23 | | | | 2023-24 | | | | ಒಟ್ಟು | | | |
|---|---|---|---|---|---|---|---|---|---|---|---|---|---|---|---|---|---|
| | | ಪ.ಜಾ | | ಪ.ಪಂ | | ಪ.ಜಾ | | ಪ.ಪಂ | | ಪ.ಜಾ | | ಪ.ಪಂ | | ಪ.ಜಾ | | ಪ.ಪಂ | |
| | ಜಿಲ್ಲೆ | ಘಟಕ | ಸಹಾಯಧ | ಘಟಕ | ಸಹಾಯಧ | ಘಟಕ | ಸಹಾಯಧ | ಘಟಕ | ಸಹಾಯ | ಘಟಕ | ಸಹಾಯಧ | ಘಟಕ | ಸಹಾಯಧನ | ಘಟಕ | ಸಹಾಯಧನ | ಘಟಕ | ಸಹಾಯಧನ |
| 1 | ಉಡುಪಿ | | | | | 2 | 1.56 | | | | | | | 2 | 1.56 | 0 | - |
| 2 | ಕಲಬುರಗಿ | 7 | 19.51 | 1 | 1.46 | | | | | | | | | 7 | 19.51 | 1 | 1.46 |
| 3 | ಕೊಡಗು | 2 | 0.52 | | | | | | | | | | | 2 | 0.52 | 0 | - |
| 4 | ಕೋಲಾರ | 3 | 5.13 | 2 | 1.15 | 4 | 3.42 | | | 8 | 6.10 | 1 | 0.75 | 15 | 14.65 | 3 | 1.90 |
| 5 | ಗದಗ | 3 | 4.24 | 1 | 1.05 | 2 | 0.88 | 1 | 0.70 | | | | | 5 | 5.12 | 2 | 1.76 |
| 6 | ಚಿಕ್ಕಬಳ್ಳಾಪುರ | | | | | 1 | 0.52 | 2 | 4.00 | | | | | 1 | 0.52 | 2 | 4.00 |
| 7 | ಚಿತ್ರದುರ್ಗ | 6 | 6.75 | | | | | | | | | 2 | 5.96 | 6 | 6.75 | 2 | 5.96 |
| 8 | ತುಮಕೂರು | 5 | 5.10 | 2 | 1.73 | 8 | 12.03 | | | 1 | 3.60 | 2 | 0.98 | 14 | 20.73 | 4 | 2.71 |
| 9 | ದಕ್ಷಿಣ ಕನ್ನಡ | | | | | 1 | 3.30 | | | | | | | 1 | 3.30 | 0 | - |
| 10 | ಧಾರವಾಡ | 1 | 0.24 | | | | | | | 5 | 2.63 | 1 | 0.62 | 6 | 2.87 | 1 | 0.62 |
| 11 | ಬಳ್ಳಾರಿ | | | | | 2 | 0.87 | 1 | 0.56 | | | | | 2 | 0.87 | 1 | 0.56 |
| 12 | ಬೀದರ್ | 7 | 4.28 | 2 | 1.95 | 5 | 2.76 | 2 | 1.35 | | | | | 12 | 7.04 | 4 | 3.30 |
| 13 | ಬೆಂಗಳೂರು ಗ್ರಾಮಾಂತ | 9 | 25.37 | 8 | 10.79 | 10 | 23.31 | 3 | 10.32 | 6 | 19.45 | 5 | 7.21 | 25 | 68.12 | 16 | 28.31 |
| 14 | ಬೆಂಗಳೂರು ನಗರ | 7 | 17.68 | 1 | 1.94 | 1 | 4.82 | | | | | | | 8 | 22.50 | 1 | 1.94 |
| 15 | ಬೆಳಗಾವಿ | 1 | 4.68 | | | | | | | | | | | 1 | 4.68 | 0 | - |
| 16 | ಮಂಡ್ಯ | 2 | 1.16 | | | 2 | 0.94 | | | 1 | 1.34 | 1 | 2.75 | 5 | 3.44 | 1 | 2.75 |
| 17 | ಮೈಸೂರು | 5 | 8.87 | | | 7 | 16.79 | | | | | 1 | 2.12 | 12 | 25.66 | 1 | 2.12 |
| 18 | ಯಾದಗಿರಿ | | | | | | | | | 2 | 2.42 | | | 2 | 2.42 | 0 | - |
| 19 | ರಾಮನಗರ | 1 | 0.70 | | | | | | | 1 | 1.2 | | | 2 | 1.90 | 0 | - |
| 20 | ರಾಯಚೂರು | 4 | 11.69 | | | 2 | 7.26 | | | | | | | 6 | 18.96 | 0 | - |
| 21 | ವಿಜಯಪುರ | 4 | 1.13 | | | 4 | 3.23 | 1 | 0.12 | 3 | 3.49 | | | 11 | 7.84 | 1 | 0.12 |
| 22 | ಶಿವಮೊಗ್ಗ | | | | | 3 | 1.72 | | - | | | | | 3 | 1.72 | 0 | - |
| 23 | ದಾವಣಗೆರೆ | | | | | | | | | 4 | 4.37 | 1 | 1.77 | 4 | 4.37 | 1 | 1.77 |
| 24 | Grand Total | 67 | 117.04 | 17 | 20.07 | 54 | 83.41 | 10 | 17.05 | 31 | 44.60 | 14 | 22.16 | 152 | 245.05 | 41 | 59.27 |

# ಅನುಬಂಧ - 08(LCQ - 956)

ವಿಶೇಷ ಘಟಕ ಯೋಜನೆಯ ವಿದ್ಯುಚ್ಛಕ್ತಿ ಸಹಾಯಧನ ಬಿಡುಗಡೆ ಯೋಜನೆಯಡಿ 2021-22 ರಿಂದ 2023-24ನೇ ಸಾಲಿನವರೆಗೂ ಬಿಡುಗಡೆ ಮಾಡಿರುವ ಸಹಾಯಧನದ ಜಿಲ್ಲಾವಾರು ವಿವರಗಳು

ರೂ. ಲಕ್ಷಗಳಲ್ಲಿ

| ಕ್ರ.ಸಂ | ಜಿಲ್ಲೆ | 2021-22 | | 2022-23 | | 2023-24 | | ಒಟ್ಟು | |
|---|---|---|---|---|---|---|---|---|---|
| | | ಘಟಕ | ಸಹಾಯಧನ | ಘಟಕ | ಸಹಾಯಧನ | ಘಟಕ | ಸಹಾಯಧನ | ಘಟಕ | ಸಹಾಯಧನ |
| 1 | ಕೋಲಾರ | 1 | 2.56 | 11 | 40.71 | 6 | 27.32 | 18 | 70.59 |
| 2 | ಗದಗ | 1 | 2.14 | | - | | | 1 | 2.14 |
| 3 | ಚಿಕ್ಕಬಳ್ಳಾಪುರ | 1 | 0.40 | | - | | | 1 | 0.40 |
| 4 | ಧಾರವಾಡ | 2 | 1.61 | 5 | 2.82 | 2 | 1.65 | 9 | 6.08 |
| 6 | ಬಾಗಲಕೋಟೆ | 1 | 0.05 | | - | | | 1 | 0.05 |
| 7 | ಬೆಂಗಳೂರು ನಗರ | 1 | 0.01 | | - | 1 | 0.05 | 2 | 0.06 |
| 8 | ಯಾದಗಿರಿ | 2 | 3.53 | 3 | 6.72 | 1 | 3.69 | 6 | 13.94 |
| 9 | ರಾಯಚೂರು | 2 | 9.20 | 1 | 6.34 | | | 3 | 15.54 |
| 10 | ತುಮಕೂರು | | | | | 1 | 23.71 | 1 | 23.71 |
| | ಒಟ್ಟು | 11 | 19.52 | 20 | 56.59 | 11 | 56.42 | 42 | 132.53 |